ಸಂಬಂಧಪಟ್ಟ ಸಚಿವರು ಕೂಡಲೇ ಕ್ರಮ ತೆಗೆದುಕೊಂಡು ಈ ತೊಂದರೆಯನ್ನು ನಿವಾರಣೆ ಮಾಡುವಂತೆ ತಾವು ಆವರಿಗೆ ಆದೇಶ ಕೊಡಬೇಕು ಮತ್ತು ಈ ಸದನದಲ್ಲಿ ಅವರ ಅಭಿಪ್ರಾಯವನ್ನು ತಿಳಿಸುವುದಕ್ಕೆ ಒತ್ತಾಯ ಮಾಡುತ್ತೇನೆ.

LEGISLATIVE BUSINESS

The Karnataka Taxation Laws (Amendment) Bill, 1980.

Motion to Consider.

SRI M. VEERAPPA MOILY (Minister for Finance & Planning).-- I beg to move :

" That the Karnataka Taxation Laws (Amendment) Bill, 1980. be taken into consideration. "

The question was proposed.

ಶ್ರೀ ಎಂ. ವೀರಪ್ಪ ಮೊಯ್ಲಿ .— ಸನ್ಮಾನ್ಯ ಅಧ್ಯಕ್ಷರೇ, ನಾನು ಬಜೆಟ್ ಭಾಷಣದಲ್ಲಿ ಯಾವ ಒಂದು ತೆರಿಗೆಯನ್ನು ಹೊರಿಸಬೇಕು ಎಂದು ಹೇಳಿದ್ದೆನೋ ಅದನ್ನು ಜಾರಿ ಮಾಡುವುದಕ್ಕೋಸ್ಕರ ಈ ಮಸೂದೆಯನ್ನು ಈ ಸದನದ ಮುಂದೆ ತಂದಿದ್ದೇವೆ. ಈ ತೆರಿಗೆಯಲ್ಲಿ ಹೆಚ್ಚಾಗಿ ನಮ್ಮ ನೆರೆ ರಾಜ್ಯಗಳಲ್ಲಿ ರತಕ್ಕ ತೆರಿಗೆಯ ಒಂದು ಧೋರಣೆಯನ್ನು ಕೂಡ ನೋಡಿ ಮತ್ತು ಜನಸಾಮಾನ್ಯರ ಮೇಲೆ ತೆರಿಗೆಯ ಭಾರ ಹೆಚ್ಚು ಬೀಳದಂತೆ ಮತ್ತು ಯಾರಿಗೆ ಕೊಡಲಿಕ್ಕೆ ಸಾಮರ್ಥ್ಯವಿದೆ ಅವರ ಮೇಲೆ ಬೀಳುವಂತೆ ತೆರಿಗೆಯನ್ನು ಹಾಕಿದ್ದೇವೆ, ಉದಾಹರಣೆಗೆ ಹೇಳುವುದಾದರೆ, ಗ್ರೌಂಡ್‌ನಟ್ ಮೇಲೆ ನೆರೆ ರಾಜ್ಯಗಳಲ್ಲಿ ೩ ಪರ್ಸೆಂಟ್, ೪ ಪರ್ಸೆಂಟ್, ೫ ಪರ್ಸೆಂಟ್ ಟ್ಯಾಕ್ಸ್ ಇದೆ. ನಮ್ಮ ರಾಜ್ಯದಲ್ಲಿ ಎರಡೂವರೆ ಪರ್ಸೆಂಟ್ ಇದ್ದುದನ್ನು ೩ ಪರ್ಸೆಂಟ್‌ಗೆ ಸಂಯೋಜಿಸಿ ಹೆಚ್ಚಿಸಿದ್ದೇವೆ. ಇದನ್ನು ಜನಸಾಮಾನ್ಯರಿಗೆ ತೊಂದರೆ ಕೊಡುವಂಥ ದೃಷ್ಟಿಯಿಂದ ಮಾಡಿಲ್ಲ. ಆದ್ದರಿಂದ ಇದನ್ನು ಒಪ್ಪಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ

ಶ್ರೀ ಎಂ. ಚಂದ್ರಶೇಖರ್ (ಜಯನಗರ) .— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಗ್ರೌಂಡ್‌ನಟ್‌ಆಯಿಲ್,ಕೋಕನಟ್ ಆಯಿಲ್ ಮತ್ತು ಆದರ್ ಎಡಿಬಲ್‌ಆಯಿಲ್ಸ್ ಪ್ರತಿಯೊಂದೂ ಮಾರಾಟ ತೆರಿಗೆ ಏರಿಕೆಗೆ ಸೇರುತ್ತದೆ. ಕಡಲೆಕಾಯಿ ಎಣ್ಣೆ ಅವಶ್ಯಕ ವಸ್ತು. ಈಗಾಗಲೇ ಹಲವಾರು ಕಾರಣಗಳಿಂದ ಬೆಲೆಗಳು ಏರುತ್ತಾ ಇರುವುದರಿಂದ ಸರ್ಕಾರವೂ ಕೂಡ ಎರಡೂವರೆ ಶೇಕಡ ತೆರಿಗೆ ಇದ್ದುದನ್ನು ಮೂರು ಶೇಕಡ ಮಾಡುವುದರಿಂದ, ಅವಶ್ಯಕ ವಸ್ತುಗಳ ಬೆಲೆಯನ್ನು ಇಳಿಸುತ್ತೇವೆ ಎಂದು ಹೇಳುವಂಥ ಸರ್ಕಾರದ ನೀತಿಗೆ ವಿರೋಧವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಏನೆಂದರೆ, ಇದು ಅವಶ್ಯಕ ವಸ್ತು ಆಗಿರುವುದರಿಂದ ಮತ್ತು ಜನಸಾಮಾನ್ಯರಿಗೆ ಬಹಳ ಮುಖ್ಯವಾದಂಥ ಪದಾರ್ಥವಾಗಿರುವುದರಿಂದ ಅಲ್ಲದೆ ಇದರಿಂದ ಬರತಕ್ಕಂಥ ಆದಾಯ ಹೆಚ್ಚಿಗೆ ಇರುವುದಿಲ್ಲ. ಮತ್ತೆ ಶ್ರೀ ಸ್ಟಾರ್, ಫೋರ್ ಸ್ಟಾರ್, ಫೈವ್ ಸ್ಟಾರ್ ಹೋಟೆಲ್‌ಗಳಲ್ಲಿ ಮಾರಾಟ ಮಾಡತಕ್ಕಂಥ ಆಹಾರ ಪದಾರ್ಥಗಳ ಮೇಲೆ ಇನ್ನು ಷ್ಟು ಹೆಚ್ಚಿಗೆ ತೆರಿಗೆ ಹಾಕಿದರೂ ತೊಂದರೆಯಾಗುವುದಿಲ್ಲ. ಹೆಚ್ಚಾಗಿ ಪಣ ಬರುತ್ತದೆ, ಈ ಕಾರಣಗಳಿಂದ ಜನಸಾಮಾನ್ಯರಿಗೆ ಅವಶ್ಯ ವಸ್ತುವಾದಂಥ ಈ ಕಡಲೆಕಾಯಿ ಎಣ್ಣೆ, ತೆಂಗಿನಕಾಯಿ ಎಣ್ಣೆ ಮುಂತಾದವುಗಳ ಮೇಲೆ ಎರಡೂವರೆ ಶೇಕಡ ಇದ್ದುದನ್ನು ೩ ಶೇಕಡ ಏನು ಮಾಡಿದಿರಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಎರಡನೆಯದು, ಪಟ್ಟಿ ನಂಬರ್ ೩ ರಲ್ಲಿ ಕನ್‌ಫೆಕ್ಷನರಿ, ಕೇಕ್ಸ್ ಮತ್ತು ಬಿಸ್ಕಟ್ಸ್ ಮೇಲೆ ಶೇಕಡ ಆರು ತೆರಿಗೆ ಇದ್ದುದನ್ನು ಶೇಕಡ ೮ ಜಾಸ್ತಿ ಮಾಡಿದ್ದೀರಿ. ತಮಗೆ ಗೊತ್ತಿದೆ, ಸಕ್ಕರೆ ಬೆಲೆ ಜಾಸ್ತಿಯಾಗಿರುವುದರಿಂದ ಪ್ರತಿಯೊಂದು ಸಿಹಿ ಪದಾರ್ಥದ ಬೆಲೆಯೂ ಜಾಸ್ತಿಯಾಗಿದೆ. ಬ್ರೆಡ್, ಬಿಸ್ಕಟ್ಸ್, ಬ್ರೆಡ್‌ನ್ನು ಉಪಯೋಗ ಮಾಡತಕ್ಕಂಥಾವರು ಚಿಕ್ಕ ಮಕ್ಕಳು, ಮತ್ತು ಆಸ್ಪತ್ರೆಯಲ್ಲಿ ಇರತಕ್ಕಂಥ ರೋಗಿಗಳು. ಬ್ರೆಡ್ ಮತ್ತು ಬಿಸ್ಕಟ್ಸ್‌ನ್ನು ಮಾಡಲು ಸಕ್ಕರೆಯನ್ನು ಉಪಯೋಗ ಮಾಡುತ್ತಾರೆ. ಇದನ್ನೆಲ್ಲಾ ಯಾವುದೇ ಮೇಲುವರ್ಗದ ಅಥವಾ ಹೆಚ್ಚು ಹಣವಂತರು ಏನಿದ್ದಾರೆ ಅವರಿಗೆ ಸಾಮಾನ್ಯ

ವಾಗಿ ಸಕ್ಕರೆ ಖಾಯಿಲೆಗಳು ಇರುವುದರಿಂದ ಅವರು ಇದನ್ನು ಹೆಚ್ಚಿಗೆ ಉಪಯೋಗಿಸುವುದಿಲ್ಲ. ಬಡ ಜನರು ಯಾವುದಾದರೂ ಹಬ್ಬ ಹುಣ್ಣಿಮೆಗಳಲ್ಲಿ ವಿಶಾಯಿ ಬಿಸ್ಕತ್ತುಗಳನ್ನು ಮತ್ತು ಆಸ್ಪತ್ರೆಗಳಲ್ಲಿ ರೋಗಿಗಳು ಉಪಯೋಗಿಸುವುದರಿಂದ ಇದರಿಂದ ಹೆಚ್ಚಿಗೆ ಆದಾಯ ಬರುತ್ತದೆಂದು ನನಗನ್ನಿಸುವುದಿಲ್ಲ. ಆದ್ದರಿಂದ ಈ ಎರಡು ಐಟಂಗಳ ಮೇಲೆ ತಾವೇನು ಹೆಚ್ಚಿಗೆ ತೆರಿಗೆ ಹಾಕಿದ್ದೀರಿ ಅದನ್ನು ಹಿಂದೆ ಇದ್ದ ಮಟ್ಟಕ್ಕೆ ಇಳಿಸಿದರೆ ಈ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದರ ಬಗ್ಗೆ ನಾನು ಎರಡು ತಿದ್ದುಪಡಿ ಕೂಡ ತಮಗೆ ಕಳಿಸಿದ್ದೇನೆ. ಇದರ ಬಗ್ಗೆ ಸಭೆ ಚರ್ಚೆಮಾಡಿ ಈ ಎರಡು ಕ್ಲಾಸ್ ಗಳನ್ನು ತೆಗೆದುಹಾಕಿದರೆ ಈ ಬಿಲ್ಲಿಗೆ ನಮ್ಮ ಅಭಿಮತ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ) .— ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಮಂತ್ರಿಗಳು ತಂದಿರತಕ್ಕಂಥ ಈ ತಿದ್ದುಪಡಿಯನ್ನು ನಾನು ವಿರೋಧ ಮಾಡುತ್ತೇನೆ. ಇದರ ಬಗ್ಗೆ ಒಂದು ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಇದರಲ್ಲಿ,

> " Articles of food and drink, sold to Customers in Three Star, Four Star and Five Star Hotels as recognised by Tourism Department, Government of India and not covered by serial number 136. whether such articles are meant to be consumed in the premises or outside " ಎಂದು ಇದೆ.

ಇದಕ್ಕೆ ೧೦ ಪರ್ಸೆಂಟ್ ಟ್ಯಾಕ್ಸ್ ಹಾಕಬೇಕು ಎಂದು ತಂದಿದ್ದೀರಿ. ಈ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದಿದೆ, ಸರ್ದಾರ್ ಸಿಂಗ್ ವರ್ಸಸ್ ರಾಜಾಸ್ಥಾನ್ ಅವರು ಹಾಕಿರತಕ್ಕ ಕೇಸು. ಹೋಟೆಲ್ ಇಂಡಸ್ಟ್ರೀಸ್ ಬಗ್ಗೆ ಹೇಳುತ್ತಾ, ಈ ಹೋಟೆಲ್‌ಗಳಲ್ಲಿ ಏನ್ನೊಂದು ಫುಡ್ ಸರ್ವೆ ಮಾಡುತ್ತಾರೋ ಅದರ ಮೇಲೆ ಹಾಕಿರತಕ್ಕ ಸೇಲ್ಸ್ ಟ್ಯಾಕ್ಸ್ ಏನಿದೆ ಅದನ್ನು ಕಿತ್ತು ಹಾಕಿದ್ದಾರೆ. ಈ ರೀತಿ ಹಾಕುವುದು ಸರಿಯಲ್ಲ ಎಂದು ತೀರ್ಮಾನ ಕೊಟ್ಟಿದ್ದಾರೆ. ಆ ತೀರ್ಮಾನದ ಕಾಪಿ ನನ್ನ ಹತ್ತಿರ ಇದೆ. ಅದನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ಈ ರೀತಿ ಟ್ಯಾಕ್ಸ್ ಹಾಕುವುದು ಸರಿಯಲ್ಲ ಎಂದು ಹೇಳಿದ್ದಾರೆ. ಇದನ್ನು ತಾವು ಪರಾಂಬರಿಸಬೇಕು. ಇದು ೧೯೭೭ರಲ್ಲಿ ಕೊಟ್ಟಿರತಕ್ಕಂಥ ತೀರ್ಮಾನ. ಆದಾದನಂತರ ಎರಡು ವರ್ಷಗಳ ಕಾಲ ಹೋಟೆಲುಗಳಲ್ಲಿ ಸರ್ವೆ ಮಾಡತಕ್ಕಂಥ ಫುಡ್ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುತ್ತಾ ಇರಲಿಲ್ಲ. ಇತ್ತೀಚೆಗೆ ಪುನಃ ಅದನ್ನು ಪ್ರಾರಂಭ ಮಾಡಬೇಕು ಎಂದು ತಾವು ಮಾಡುತ್ತಾ ಇದ್ದೀರಿ. ಇದು ಈ ಒಂದು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ಗೆ ವಿರೋಧವಾಗಿದೆ. ಆದ್ದರಿಂದ ಇದನ್ನು ವಾಪಸ್ ತೆಗೆದುಕೊಳ್ಳಬೇಕು. ಈ ಜಡ್ಜ್‌ಮೆಂಟ್ ಕಾಪಿಯನ್ನು ತಮಗೆ ಕಳಿಸಿಕೊಡುತ್ತೇನೆ. ತಾವು ನೋಡಬೇಕು. ಮತ್ತೆ ಗ್ರೌಂಡ್‌ನಟ್ ಆಯಿಲ್, ಕೋಕನಟ್ ಆಯಿಲ್ ಮೇಲೆ ಎರಡೂವರೆ ಪರ್ಸೆಂಟ್ ಇರುವುದನ್ನು ೩ ಪರ್ಸೆಂಟ್‌ಗೆ ಏರಿಸಿದ್ದೀರಿ. ಇದನ್ನು ವಾಪಸ್ ತೆಗೆದುಕೊಳ್ಳಬೇಕು. ಮತ್ತೆ ಷೋ ಟ್ಯಾಕ್ಸ್ ಜಾಸ್ತಿಮಾಡಬೇಕು ಎಂದು ಹಾಕಿದ್ದೀರಿ. ಈ ರೀತಿ ಷೋ ಟ್ಯಾಕ್ಸ್ ಜಾಸ್ತಿ ಮಾಡುತ್ತಾ-ಮಾಡುತ್ತಾ ಇದ್ದೀರಿ ಆದರೆ ಮನರಂಜನೆಗೆ ಏನು ಜನ ಚಿತ್ರಮಂದಿರಗಳಿಗೆ ಹೋಗುತ್ತಾ ಇದ್ದಾರೆ ಅಲ್ಲಿ ಸೌಲಭ್ಯ ಕಡಿಮೆಯಾಗುತ್ತಿದೆ. ಡೆಪ್ಯುಟಿ ಕಮಿಷನರ್ ಬಾಲಸುಬ್ರಮಣ್ಯಂ ರವರು ಇದ್ದಾಗ ಚಿತ್ರಮಂದಿರಗಳಲ್ಲಿ ಹೆಚ್ಚಿನ ಸೌಲಭ್ಯ ಕೊಡಬೇಕು ಎಂದು ಅನೇಕ ಬಾರಿ ಜನ ಕಂಪ್ಲೇಂಟ್‌ಗಳನ್ನು ಕೊಟ್ಟಿದ್ದಾರೆ, ಯಾವ ಥಿಯೇಟರ್‌ನಲ್ಲೂ ಕೂಡ ಸರಿಯಾದ ಸೌಲಭ್ಯ ಇಲ್ಲ.

೩-೩೦ ಪಿ. ಎಂ.

ಆಲ್ಲಿ ಏರ್ ಕಂಡೀಷನ್ ಎಕ್ವಿಪ್‌ಮೆಂಟ್ ಸರಿಯಾಗಿ ವರ್ಕ ಆಗುತ್ತಿರುವುದಿಲ್ಲ. ಯಾವುದೂ ಆಲ್ಲಿ ಸರಿಯಾಗಿರುವುದಿಲ್ಲ. ತಾವು ಆಲ್ಲಿಗೆಲ್ಲಾ ಹೋಗಿ ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಒಂದಕ್ಕೆ ೧೦ ರಸ್ಸು ದುಬಾರಿಯಾಗಿ ಇವತ್ತು ಎಕ್ಸಪ್ಲಾಯ್‌ಟೇಷನ್‌ನ್ನು ಥಿಯೇಟರಗಳ ಮಾಲಕ ಮಾಡುತ್ತಿದ್ದಾರೆ. ಷೋ ಟ್ಯಾಕ್ಸ್ ಜಾಸ್ತಿ ಮಾಡಿ ಅವರಿಗೆ ಸರಿಯಾಗಿ ಕೊಡಬೇಕಾದ ಸೌಲಭ್ಯವನ್ನು, ಯಾರು ಮನೋರಂಜನೆಗಾಗಿ ಬರುತ್ತಾರೋ ಆ ರಸಿಕರಿಗೆ ಒದಗಿಸಿಕೊಡುತ್ತಿಲ್ಲ.

ಕೊನೆಯದಾಗಿ ಹೋಟೆಲ್‌ಗಳಲ್ಲಿ ಸರ್ವೆ ಮಾಡತಕ್ಕ ಫುಡ್‌ನ ಮೇಲೆ ವಿಧಿಸಿರತಕ್ಕ ತೆರಿಗೆಯನ್ನು ವಾಪಸ್ಸು ತೆಗೆದು ಹಾಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀ ಸಾಗರ್ (ಚಿಕ್ಕಪೇಟೆ).— ಸ್ವಾಮಿ, ನಮ್ಮ ಸರ್ಕಾರದವರು ಎಣ್ಣೆಗಳ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಈ ಪ್ರಸೂದೆಯನ್ನು ತಂದಿದ್ದಾರೆ. ಈಗಾಗಲೇ ಎಣ್ಣೆಗಳ ಬೆಲೆ ಜಾಸ್ತಿ ಯಾಗಿದೆ. ಅಂಥಾದರಲ್ಲಿ ಇದು ಏತಕ್ಕೆ ಸ್ವಾಮಿ,? ಇದರ ಉದ್ದೇಶವೇನು? ಇದರಿಂದೇನೋ ಸರ್ಕಾರಕ್ಕೆ ದುಡ್ಡು ಬರಬಹುದು. ಆದರೆ ಈಗಾಗಲೇ ವನಸ್ಪತಿ ತೈಲಗಳ ಬೆಲೆ ಜಾಸ್ತಿಯಾಗಿದೆ. ಮತಿ ತರ ಬೆಲೆಗಳೂ ಸಹ ಜಾಸ್ತಿಯಾಗುತ್ತಿವೆ. ಇದರ ಉದ್ದೇಶವೇನು, ಜನ ಎಣ್ಣೆಯನ್ನು ಸಹ ಉಪ ಯೋಗಿಸಬಾರದೆಂದೇ? ತುಪ್ಪವಂತೂ ಜನಗಳ ಕೈಗೆ ಸಿಕ್ಕುವಂಥಾ ವಸ್ತುವಲ್ಲ ಮಾನ್ಯ ಶ್ರೀಮತಿ ಪ್ರಮಿಳಾ ರವರಂಥವರು ಕೊಂಡುಕೊಳ್ಳಬಹುದೇನೋ, ನಾನಂತೂ ತುಪ್ಪವನ್ನೇ ಉಪಯೋಗಿಸದಿರುವು ದರಿಂದ ಅದರಿಂದ ನನಗೇನೂ ಆದರ ಚಿಂತೆಯಿಲ್ಲ.

ಶ್ರೀಮತಿ ಎಸ್. ಪ್ರಮಿಳಾ.— ಬೆಂಗಳೂರಿನ ತುಪ್ಪವನ್ನು ತಿನ್ನುವ ಹಾಗೆ ಇಲ್ಲವಾ...

ಶ್ರೀ ಎ. ಲಕ್ಷ್ಮೀಸಾಗರ್.— ದಯಮಾಡಿ ನೋಡಿ ಸ್ವಾಮಿ, ಬೇರೆ ಯಾವುದಾದರ ಮೇಲೆ ಟ್ಯಾಕ್ಸ್ ಹಾಕಿ ತೆಗೆದುಕೊಂಡು ಬನ್ನಿ.

ಶ್ರೀ ಎಂ, ವೀರಪ್ಪ ಮೊಯ್ಲಿ.— ಬ್ರಹ್ಮಚಾರಿಗಳು ತುಪ್ಪ ತಿನ್ನಬಾರದು ಅಂತ ಇದೆಯೇ?

ಶ್ರೀ ಎ, ಲಕ್ಷ್ಮೀಸಾಗರ್ — ಇವತ್ತು ತಾವು ಏನೋ ಎಣ್ಣೆ ಮೇಲೆ ಜಾಸ್ತಿ ತೆರಿಗೆಯನ್ನು ಹಾಕುವು ದಕ್ಕೆ ಹೊರಟ್ಟಿದ್ದೀರಿ, ನನ್ನ ಒಬ್ಬನಿಗೇನೊ ತೊಂದರೆ ಇಲ್ಲ ಆದರೆ ಎಣ್ಣೆಯನ್ನು ಉಪಯೋಗಿಸತಕ್ಕಂಥ ಜನ ನಮ್ಮ ಸಮಾಜದಲ್ಲಿ ೧೦೦ಕ್ಕೆ ೯೦ ಜನ ಉಪಯೋಗಿಸಲೇ ಬೇಕು. ಈ ಬಾದ್ಯ ತೈಲ್ಯವನ್ನು ಬರೀ ತಲೆಗೆ ಉಪಯೋಗಿಸುವ ವಿಚಾರ ಬೇಡ, ಅಡಿಗೆಗೆ ಊಟಕ್ಕೆ ಸಾಮಾನ್ಯ ಜನ ಉಪಯೋಗಿಸುವಂಥ ವಿವಿಧ ಎಣ್ಣೆಗಳ ಮೇಲೆ ತೆರಿಗೆಯನ್ನು ಹಾಕಿದರೆ ಹೇಗೆ? ಇವತ್ತು ನೀವು ತೆರಿಗೆಯನ್ನು ಹಾಕುವುದಕ್ಕೆ ಬೇಕಾ ದಷ್ಟು ಮಾರ್ಗಗಳಿವೆ ಸರ್ಕಾರ ಹುಡುಕಿದರೆ ಬೇಕಾದಷ್ಟು ಸಿಗುತ್ತದೆ ಇಲ್ಲ ಅಂತ ಹೇಳಿದರೆ ನನ್ನನ್ನು ಪ್ರೈವೇಟ್ ಆಗಿ ಕೇಳಿ ನಾನು ನಿಮಗೆ ಲಿಸ್ಟ್ ಕೊಡುತ್ತೇನೆ. ಇವತ್ತು ಎಣ್ಣೀ ಉತ್ಪಾದನೆ ಕಡಿಮೆ ಯಾಗಿದೆ ಎಂದು ಹಿಂದಿನ ಸರ್ಕಾರ ಕೂಡ ಹೇಳಿಕೊಂಡು ಬಂದಿದೆ, ನಿಮ್ಮ ಸರ್ಕಾರ ಕೂಡ ಹೇಳುತ್ತಿದೆ ಮತ್ತೆ ಎಣ್ಣೆ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಸೌಲಭ್ಯಗಳೂ ಸಹ ಸಿಗುತ್ತಿಲ್ಲ. ಆದುದರಿಂದ ಈಗಿ ರುವ ಎಣ್ಣೆಯ ವಿತರಣೆಯು ಸರಿಯಾಗಿ ಆಗುವುಂತೆ ವ್ಯವಸ್ಥೆ ಮಾಡಬೇಕು, ಎಣ್ಣೆ ಬೆಲೆ ಬೇರೆ ಜಾಸ್ತಿ ಯಾಗುತ್ತಿದೆ. ವಿತರಣೆ ಕ್ರಮ ಸರಿಯಾಗಿಲ್ಲ ಇದರಿಂದ ಈವತ್ತು ಬಡವರಿಗೆ ತುಂಬಾ ತೊಂದರೆ ಯಾಗುತ್ತಿದೆ. ತಾವು ಎಷ್ಟೋ ಸಾರಿ ಬಡವರಿಗೋಸ್ಕರ ಈ ಸರ್ಕಾರವಿದೆ ಅಂತ ಹೇಳುತ್ತಾ ಬಂದಿದ್ದೀರಿ ಬಡವರಂತೂ ಅವರ ಜೀವಮಾನದಲ್ಲಿಯೇ ತುಪ್ಪವನ್ನು ಹಬ್ಬ ಹರಿದಿನಗಳಲ್ಲಾ ಕೂಡ ಉಪಯೋಗಿಸುವು ದಕ್ಕೆ ಆಗುತ್ತಿಲ್ಲ. ಈಗ ಉಪಯೋಗಿಸುತ್ತಿರುವುದು ಇದು ಎಣ್ಣೆಯೊಂದನ್ನೇ ಆದುದರಿಂದ ಈಗ ತಾವು ಏನು ಟ್ಯಾಕ್ಸ್‌ನ್ನು ಹಾಕಬೇಕೆಂದು ತಂದಿದ್ದೀರಿ ಇದನ್ನು ತೆಗೆದು ಬಿಡುವುದೇ ಒಳ್ಳೆಯದೆಂದು ಕಾಣುತ್ತದೆ. ನಾನು ಹೇಳಿದೆ ಎಂದು ತಗೆಯಬೇಡಿ, ನಿಮ್ಮ ಸ್ವಂತ ಇಚ್ಛೆಯಿಂದ ಈ ಎಣ್ಣೆಯ ಮೇಲೆ ಹೆಚ್ಚಿನ ತೆರಿಗೆ ಯನ್ನು ಹಾಕುವುದನ್ನು ವಾಪಸ್ಸು ತೆಗೆದುಕೊಂಡರೆ ಅದರಿಂದ ನಿಮಗೇ ಹೆಚ್ಚಿನ ಲಾಭ ಸಿಗುತ್ತದೆ.

ಇನ್ನು ಹೊಟೇಲುಗಳ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ದೊಡ್ಡ ದೊಡ್ಡ ಹೋಟೆಲ್ ಗಳ ಮೇಲೆ ಹೆಚ್ಚಿನ ತೆರಿಗೆ ಹಾಕಿದ್ದೀರಿ ಆದಕ್ಕೆ ಚಿಂತೆಯಿಲ್ಲ ನಾನು ಅಂತ ದೊಡ್ಡ ದೊಡ್ಡ ಹೋಟೆಲ್ ಗಳಿಗೂ ಹೋಗುವುದಿಲ್ಲ. ಆದರೆ ಈ ಸಣ್ಣ ಸಣ್ಣ...

ಶ್ರೀ ಎಂ ವೀರಪ್ಪ ಮೊಯ್ಲಿ.—ಇದು ಥ್ರೀ ಸ್ಟಾರ್, ಫೋರ್ ಸ್ಟಾರ್ ಹೋಟೆಲ್‌ಗಳಿಗೆ ಮಾತ್ರ ಅನ್ವಯವಾಗುತ್ತದೆ. ಸಣ್ಣ ಹೋಟೆಲ್‌ಗಳಿಗೆ ಅನ್ವಯಿಸುವುದಿಲ್ಲ. ಅದನ್ನೇ ಶ್ರೀ ರಾಮ್‌ದೇವ್‌ರವರು ಮಾತನಾಡುತ್ತಾ ಅದರ ಬಗ್ಗೆ ಒಂದು ಸುಪ್ರೀಂ ಕೋರ್ಟಿನ ಆಜ್ಞೆ ಇದೆಂದು ಹೇಳಿದರು.

ಶ್ರೀ ಎ. ಲಕ್ಷ್ಮೀ ಸಾಗರ್.—ಇನ್ನು ಈ ಕನ್‌ಫೆಕ್ಷನರೀಸ್, ಬಿಸ್ಕೆಟ್ಸ್ ಮತ್ತು ಕೇಕ್ಸ್ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದ್ದೀರಿ. ತಾವು ಒಂದು ಸಾಯಂಕಾಲ ನನ್ನ ಜೊತೆಗೆ ಬನ್ನಿ. ಅನೇಕ ಜನ ಮನೆಗಳಲ್ಲಿ ರೊಟ್ಟಿ ಮಾಡುವುದಕ್ಕೆ ಆಗದೇ ಇರುವವರು. ಬಡವರು ಏನು ಮಾಡುತ್ತಾರೆಂದರೆ, ಸಾಯಂಕಾಲದ ವೇಳೆಯಲ್ಲಿ ಈ ರೊಟ್ಟಿಯನ್ನು ಒಂದು ಸಾವಿರಾರು ಜನ ಬೆಂಗಳೂರಿನಲ್ಲಿ ಜೀವನ ಮಾಡುತ್ತಿದ್ದಾರೆ. ಲೇಟ್ ಆಗಿ ಹೋದರೆ ಎಷ್ಟೋ ಅಂಗಡಿಗಳಲ್ಲಿ ಅದು ಮುಗಿದೇ ಹೋಗಿರುತ್ತದೆ. ಈ ರೊಟ್ಟಿ, ಬನ್ ಏನಿದೆ ಇದರಲ್ಲಿ ಸಕ್ಕರೆ ಉಪಯೋಗಿಸುವುದರಿಂದ, ಇದಕ್ಕೂ ಟ್ಯಾಕ್ಸ್ ಬೀಳುತ್ತಿದೆ. ಆದರೆ ಬನ್ ಮಾಡ

ಬೇಕಾದರೆ ಸಕ್ಕರೆಯನ್ನು ಹಾಕದೇ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ತಾವು ಇದರ ಮೇಲೆ ಏತಕ್ಕೆ ಟ್ಯಾಕ್ಸ್‌ನ್ನು ಹಾಕುತ್ತಿದ್ದೀರಿ? ಮಾನ್ ಕಣ್ಣು ಹೋತವ ಮೇಲೆ ಅಂತ ಹೇಳಿದ ಹಾಗೆ ಆಗಿದೆ. ಆದುದರಿಂದ ಯಾರು ಕಡು ಬಡವರು ಇದನ್ನು ತಿಂದು ಜೀವನ ಮಾಡುತ್ತಿದ್ದಾರೋ ಅಂಥವರು ಉಪಯೋಗಿಸತಕ್ಕ ವಸ್ತುವಿನ ಮೇಲೆ ತೆರಿಗೆ ಹಾಕತಕ್ಕಂಥದ್ದು ಸಾಧುವಾದುದಲ್ಲ. ಇದನ್ನು ಸಾಮಾನ್ಯ ಜನ, ಮಧ್ಯಮ ವರ್ಗದ ಜನ ಇದಕ್ಕಿಂತಲೂ ಕೆಳವರ್ಗದ ಜನ, ಕೂಲಿಗಾರರು, ಕಾರ್ಮಿಕರು ಇದನ್ನು ಇವತ್ತು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಬೇರೆ ಆಹಾರ ಪದಾರ್ಥಗಳನ್ನು ಮಾಡಿ ತಿನ್ನಲು ಬೆಲೆಗಳು ಚಾಸ್ತಿಯಾಗಿವೆ. ಆದುದರಿಂದ ಇದರ ಮೇಲೆ ಟ್ಯಾಕ್ಸ್‌ನ್ನು ಹಾಕುವುದು ಬೇಡ, ಮೊದಲು ಇದರ ಮೇಲೆ ಹಾಕಿರುವ ತೆರಿಗೆಯನ್ನು ತೆಗೆದು ಹಾಕಿ ಬಡವರಿಗೆ ಅನುಕೂಲ ಮಾಡಿಕೊಡಿ. ಬಡವರ ಹೆಸರಿನಲ್ಲಿ ನಾವು ಆರಿಸಿ ಗೆದ್ದು ಬಂದವರು ಎಂದು ಹೇಳತಕ್ಕವರು ನೀವೇ ಅವರ ಬೆನ್ನಿಗೆ ಬರೆ ಹಾಕುವುದಕ್ಕೆ ಹೋಗಬೇಡಿ ದಯವಿಟ್ಟು ಈ ಎಣ್ಣೆ ಮತ್ತು ಕನ್‌ಫೆಕ್ಷನರೀಸ್ ಮೇಲೆ ಏನು ಹೆಚ್ಚಿನ ತೆರಿಗೆಯನ್ನು ಹಾಕಿದ್ದೀರಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ಎಸ್. ಪ್ರಮಿಳ (ಚಾಮರಾಜ ಪೇಟೆ).-ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಮಂತ್ರಿಗಳವರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಸೆಕೆಂಡ್ ಶೆಡ್ಯೂಲ್‌ನಲ್ಲಿ ಡ್ರಗಲ್ಸ್ ಮತ್ತು ಕಾರ್ಪೆಟ್ಸ್‌ಗೆ ಕೇವಲ ೨ ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ, ಆದರೆ ಈ ಕಾರ್ಪೆಟ್ಸ್‌ನ್ನು ಭಾರಿ ಶ್ರೀಮಂತರೇ ಉಪಯೋಗಿಸತಕ್ಕಂಥಾದ್ದು ಅದಕ್ಕೆ ತಾವು ಇದಕ್ಕೆ ೧೫ ಪರ್ಸೆಂಟ್ ಟ್ಯಾಕ್ಸ್‌ನ್ನು ಹಾಕಿದರೆ ಬಾಕಿ ಎಣ್ಣೆ ಕನ್‌ಫೆಕ್ಷನರೀಸ್ ಮುಂತಾದುವುಗಳ ಮೇಲೆ ಹಾಕುವ ದುಡ್ಡು ಇದರಿಂದಲೇ ಬರುತ್ತೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಮಿಳು ನಾಡಿನಲ್ಲಿರುವರೆಲ್ಲರೂ ಇವತ್ತು ಕರ್ನಾಟಕಕ್ಕೆ ಬಂದು ಇಲ್ಲಿಂದ ಖರೀದಿ ಮಾಡಿಕೊಂಡು ಹೋಗಿ ಅಲ್ಲಿ ವ್ಯಾಪಾರ ಮಾಡಿಕೊಂಡು ಹೆಚ್ಚಿನ ಲಾಭ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಇವತ್ತು ತಮಗೆ ಉದಾಹರಣೆ ಕೊಡುವುದಾದರೆ ಕಂಟೋನ್ಮೆಂಟ್ ಒಂದು ಅಂಗಡಿಯಲ್ಲಿ ೧ ಕೋಟಿ ರೂಪಾಯಿಗಳ ಕಾರ್ಪೆಟ್ಸ್ ವ್ಯಾಪಾರವಾಗುತ್ತಿದೆ. ಇದರಿಂದ ಬರತಕ್ಕ ಆದಾಯ ಸರ್ಕಾರಕ್ಕೆ ಲಾಸ್ ಆಗುತ್ತಿದೆ ಇದಕ್ಕೆ ಕಾರಣ ತಮಿಳು ನಾಡಿನಲ್ಲಿ ೫೫ ಪರ್ಸೆಂಟ್ ಹೆಚ್ಚಿಸಿರುವಾಗ ನೀವು ಇಲ್ಲಿ ಕೇವಲ ೨ ಪರ್ಸೆಂಟ್ ಹೆಚ್ಚಿಸಿದ್ದೀರಿ. ಆದುದರಿಂದ ತಾವು ಇದನ್ನು ೧೮ ಪರ್ಸೆಂಟ್‌ಗೆ ಹೆಚ್ಚಿಸಿ ಕರ್ನಾಟಕಕ್ಕೆ ಇದರಿಂದ ಆಗುತ್ತಿರತಕ್ಕ ನಷ್ಟವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೀತಿ ಮಾಡಿದರೆ ನೀವು ಬೇರೆ ಗ್ರೌಂಡ್‌ನಟ್ ಆಯಿಲ್ ಮುಂತಾದವುಗಳ ಮೇಲೆ ಟ್ಯಾಕ್ಸ್‌ನ್ನು ಹಾಕುವುದನ್ನು ತಪ್ಪಿಸಿ ಈ ಕಾರ್ಪೆಟ್ ಒಂದರಿಂದಲೇ ಆದಾಯವನ್ನು ಪಡೆದುಕೊಳ್ಳಬಹುದು. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಇನ್ನು ಆಡಿಕೆ ಮೇಲೆ ಸಹ ಹೆಚ್ಚಿನ ಕರವನ್ನು ಹಾಕಿದ್ದೀರಿ ಇದು ಏತಕ್ಕೆ ಮಾಡಿದ್ದಿರೋ ಗೊತ್ತಾಗಲಿಲ್ಲ ದಯವಿಟ್ಟು ಇದನ್ನು ತೆಗೆಯಬೇಕು ಮತ್ತೆ ರೆಡಿಮೇಡ್ ಗಾರ್ಮೆಂಟ್ಸ್, ಸ್ಕೂಲ್ ಮಕ್ಕಳು ಹಾಕಿಕೊಂಡು ಹೋಗುವಂಥಾ ಬಟ್ಟೆಗಳ ಮೇಲೆ ೫ ರಿಂದ ೮ ಪರ್ಸೆಂಟ್‌ಗೆ ಏರಿಸಿದ್ದೀರಿ. ಇದನ್ನು ದಯವಿಟ್ಟು ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹೀನೇ ಬಟ್ಟೆಯಲ್ಲಿ ಹೆಂಡಪ ಮೇಲೆ ೪೫ ಪರ್ಸೆಂಟ್ ಟಾಕ್ಸ್ ಇದ್ದುದನ್ನು ೮ ಪರ್ಸೆಂಟ್ ರೆಡ್ಯೂಸ್ ಮಾಡಿದ್ದೇವೆಂದು ಹೇಳಿದ್ದೀರಿ ಇದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ. ಇಲ್ಲದಿದ್ದರೆ ಅದು ಪ್ರಿಂಟಿಂಗ್ ಮಿಸ್ಟೇಕ್ ಆಗಿದ್ದರೆ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಆಕ್ಟಿನಲ್ಲಿ ಸರಿ ಮಾಡಿರಲಿಲ್ಲ; ನೋಟಿಫಿಕೇಷನ್‌ನಲ್ಲಿ ೬ಪರ್ಸೆಂಟ್ ಎಂದು ಇದೆ. ೬ ರಿಂದ ೮ ಪರ್ಸೆಂಟ್ ಮಾಡಿದ್ದೇವೆ; ಅಂದರೆ ೨ ಪರ್ಸೆಂಟ್ ಮಾತ್ರ ಜಾಸ್ತಿ ಮಾಡಿದ್ದೇವೆ.

ಕು. ಎಸ್ ಪ್ರಮಿಳ.— ಹೀನೇ ಪಟದಲ್ಲಿ ೨(ಎಫ್) ಅನ್ನು ನೋಡಿ

ಶ್ರೀ ಎಂ. ವೀರಪ್ಪ ಮೊಯಿಲಿ.— ಅಲ್ಲಿ ಏನೂ ಇಲ್ಲ. ಷೆಡ್ಯೂಲ್‌ನಲ್ಲಿ ೪೫ ಪರ್ಸೆಂಟ್ ಎಂದು ಪ್ರಿಂಟ್ ಆಗಿತ್ತು. ಅದನ್ನು ತಿದ್ದುಪಡಿಯಲ್ಲಿ ಸರಿ ಮಾಡಬೇಕು. ೨೪-೭-೭೯ರ ನೋಟಿಫಿಕೇಷನ್ ಪ್ರಕಾರ ೬ ಪರ್ಸೆಂಟ್ ಇದೆ. ಮಸೂದೆಯನ್ನು ನೋಡಿದ ಕೂಡಲೇ ಕಂಟ್ರಡಿಕ್ಷನ್ ಆಗಿರುವ ಹಾಗೆ ಕಾಣುತ್ತದೆ, It is not a contradiction. It was 6% and now we have increased it to 8%.

ಕು. ಎಸ್. ಪ್ರಮಿಳಾ.— ಹೆಚ್ಚು ಮಾಡುವುದರಲ್ಲಿ ವಿನೂ ತಪ್ಪಿಲ್ಲ. ೪೫ ಪರ್ಸೆಂಟ್ ಇಲ್ಲದಿದ್ದರೆ ೧೦೦ ಪರ್ಸೆಂಟ್ ಹಾಕಿ. ಕುಡಿಯುವುದನ್ನು ತಪ್ಪಿಸುವುದಾದರೆ ೧೦೦ ಪರ್ಸೆಂಟ್ ಹಾಕಿದರೂ ತಪ್ಪಿಲ್ಲ, ಒಟ್ಟಿನಲ್ಲಿ ಅವರು ಕುಡಿಯುವುದನ್ನು ಕಡಿಮೆ ಮಾಡಿದರೆ ಒಳ್ಳೆಯದು. ಆದರೆ ದಿನನಿತ್ಯ ಬಳಸತಕ್ಕ ಕಡಲೇಕಾಯಿ ಎಣ್ಣೆ, ಕೊಬ್ಬರಿ ಎಣ್ಣೆ ಮುಂತಾದ ವಸ್ತುಗಳ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿದರೆ ಜನ ಗಳಿಗೆ ಬಹಳ ಕಷ್ಟವಾಗುತ್ತದೆ. ಬೆಲೆ ದಿನೇ ದಿನೇ ಏರುವುದರಿಂದ ಊಟ ಮಾಡುವುದಕ್ಕೆ ಕಷ್ಟವಾಗುತ್ತದೆ. ಕಾರ್ಪೆಟ್ಸ್, ಲಿಕ್ಕರ್ಸ್ ಮತ್ತು ಇತರೆ ಮೇಲೆ ಜಾಸ್ತಿ ತೆರಿಗೆಯನ್ನು ಹಾಕಿ ಮಿಕ್ಕ ದಿನನಿತ್ಯ ಉಪಯೋಗಿಸತಕ್ಕ ಪದಾರ್ಥಗಳ ಮೇಲೆ ಹಾಕಬಾರದೆಂದು ಸಲಹೆ ಮಾಡುತ್ತೇನೆ.

SRI A. LAKSHMI SAGAR.— Sir, there is a proposal to tax afresh 2% on twisted silk or thrown silk. For the first time, we have thought of these unfortunate fellows. Most of them are in Bangalore and in my constituency. These are all very small wage earners. They earn about Rs. 5/- to 10/- per day. The people who are engaged in twisting of silk yarn are already under severe strain. As a result of introduction of 'Silk Exchange' and other related regulations most of them are going to lose their jobs. They are finding it difficult to continue in their jobs on account of so many difficulties. They are not able to overcome those difficulties. Their income is very meagre. Under these circumstances, if they are taxed 2% afresh, it will surely have an adverse effect on their trade. This is a very serious thing. Most of them are not having full work for a day. Only two days back, I happened to visit, along with Sri A. K. Subbaiah, to some of these houses where the twisting of silk is carried out. They are very small traders; most of them are persons who work on daily wages, if not all of them. There are about 600 twisting machines or units in Bangalore. Nearly 10,000 persons are engaged in this silk twisting and preparation of thrown silk. They are very poor people, poorest among the workers. Their service conditions are not regulalarised or regulated by any Industrial Act or any other legislation which is normally made applicable to a number of other industries. Already their condition is pitiable and this additional tax for the first time we have thought of imposing on them is surely going to break their bones. Therefore I request the Hon'ble Minister to have a second look at this. Lastly, I appeal to him in the name of these unfortunate workers of this industry to please withdraw this. With these words I conclude and thank the Chair.

ಶ್ರೀ ಕೆ. ರಾಮಭಟ್:—ತಾವು ಅಡಕೆಗೆ ಮೂರುವರೆ ಪರ್ಸೆಂಟ್ ಟ್ಯಾಕ್ಸ್ ಇದ್ದುದನ್ನು ೫ ಪರ್ಸೆಂಟ್ ಮಾಡಿದ್ದೀರಿ. ಮಂಗಳೂರಿನ ಅಡಕೆ ಮಾರಾಟ ಕೇಂದ್ರಕ್ಕೆ, ಮುಖ್ಯವಾಗಿ ಕೇರಳದಿಂದ ಅಡಕೆ ಬರುತ್ತಿದೆ. ಇಲ್ಲಿ ೫ ಪರ್ಸೆಂಟ್ ಮಾರ್ಕೆಟ್ ಸೆಸ್, ೨ ಪರ್ಸೆಂಟ್ ಸರ್‌ಚಾರ್ಜ್ ಹೀಗೆ ತೆರಿಗೆಯ ಹೊರೆ ಜಾಸ್ತಿಯಾಗಿ ಬರುವ ಮಾಲು ಕಡಿಮೆಯಾಗಿ ಕೊನೆಗೆ ಸಂಪೂರ್ಣವಾಗಿ ಮಾರ್ಕೆಟ್ಟೇ ಹಾಳಾಗುವ ಪರಿಸ್ಥಿತಿ ಬರಬಹುದು. ಈಗಾಗಲೇ ಕೇರಳದಿಂದ ನೇರವಾಗಿ ಬೊಂಬಾಯಿಗೆ ಹೋಗುವ ವ್ಯವಸ್ಥೆಯಾಗಿದೆ. ಮಾನ್ಯ ಅರ್ಥ ಮಂತ್ರಿಗಳು ಸಹ ಮಂಗಳೂರಿನವರಾದ್ದರಿಂದ ಅವರಿಗೆ ಈ ಎಲ್ಲ ವಿಚಾರಗಳು ಚೆನ್ನಾಗಿ ಗೊತ್ತಿರಬಹುದು. ಈ ಬಗೆ ಅಲ್ಲಿನ ಜಿಲ್ಲಾಧಿಕಾರಿಗಳು ಕೂಡ ಬಂದು ತಮ್ಮನ್ನು ಮತ್ತು ಮಾನ್ಯ ಮುಖ್ಯ ಮಂತ್ರಿಗಳನ್ನು ಬೇಟಿಯಾಗಿ ವಿಚಾರವನ್ನು ತಿಳಿಸಿದ್ದಾರೆಂದು ತಿಳಿದುಬಂದಿದೆ. ಈ ರೀತಿ ತೆರಿಗೆ

ಯನ್ನು ಹೆಚ್ಚಿಸುವುದರಿಂದ ಮಂಗಳೂರಿನ ಮಾರುಕಟ್ಟೆ ಸಂಪೂರ್ಣವಾಗಿ ಹೋಗಿ ಇಡೀ ನಮ್ಮ ಕರ್ನಾಟಕಕ್ಕೆ ಸಿಗುವ ಪಣ ಪೂರ್ಣವಾಗಿ ಇಲ್ಲದಂತಾಗುತ್ತದೆ. ಆದಕಾರಣ, ದಯವಿಟ್ಟು ಈ ಒಂದು ತೆರಿಗೆ ಯನ್ನು ಕೈಬಿಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಮೇಲೆ ಹಲವಾರು ಸೂಚನೆಗಳನ್ನು ಮತ್ತು ಸಲಹೆಗಳನ್ನು ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ. ಸಾಮಾನ್ಯವಾಗಿ ಕೆಲವೇ ಆಂಶಗಳ ಮೇಲೆ ಈ ಚರ್ಚೆ ನಡೆದಿದೆ. ಪ್ರಮುಖವಾಗಿ ಕಡಲೆಕಾಯಿ ಎಣ್ಣೆ ಮತ್ತು ಕೊಬ್ಬರಿ ಎಣ್ಣೆ ಮೇಲೆ, ಎರಡನೆಯದಾಗಿ ಬಿಸ್ಕತ್ತುಗಳು ಮತ್ತು ಕನ್‌ಫೆಕ್ಷನರೀಸ್ ಮೇಲೆ, ಮೂರನೆಯದಾಗಿ ಹೋಟ್ಯಾಕ್ಸ್, ನಾಲ್ಕನೆಯದಾಗಿ ಅರಾಕ್, ಐದನೆಯದಾಗಿ ಟ್ವಿಸ್ಟೆಡ್ ಸಿಲ್ಕ್ ಯಾರ್ನ್ ಹೀಗೆ ಇವುಗಳ ಮೇಲೆ ವಿಧಿಸಿರುವ ತೆರಿಗೆಗಳನ್ನು ಕುರಿತು ಮಾತನಾಡಿದ್ದಾರೆ. ಮಾನ್ಯ ರಾಮ್‌ದೇವ್‌ರವರು ಸ್ವಲ್ಪ ಮುಂಚ್ಚೆಚ್ಚರಿಕೆಯಾಗಿ ಹೋಟೆಲ್‌ಗಳ ಮೇಲೆ ಬಹುಶ: ಮುಂದೆ ಏನಾದರೂ ಬರಬಹುದೆಂದು ಊಹಿಸಿ ಹೇಳಿದ್ದಾರೆ. ಹೋಟೆಲುಗಳಲ್ಲಿ ಕೊಡತಕ್ಕ ಊಟದ ಮೇಲೆ (ಸುಪ್ರೀಂಕೋರ್ಟಿನ ಜಡ್ಜ್‌ಮೆಂಟನ್ನು ಅನುಸರಿಸಿ) ಯಾವ ರೀತಿ ತೆರಿಗೆ ಹಾಕಬಹುದೆಂಬುದನ್ನು ಪ್ರತ್ಯೇಕವಾಗಿ ಆಲೋಚನೆ ಮಾಡುತ್ತಿದ್ದೇವೆ. ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ ಯಾವುಯಾವುದರ ಮೇಲೆ ಟ್ಯಾಕ್ಸನ್ನು ಜಾಸ್ತಿ ಹಾಕಬಹುದೆಂಬ ಬಗ್ಗೆ ಒಂದು ಪಟ್ಟಿ ಮಾಡಿದ್ದೇನೆಂದರು. ಬಹುಶಃ ಅದರಲ್ಲಿ ಈ ಒಂದು ಅಂಶ ಕೂಡ ಇರಬಹುದು.

ಶ್ರೀ ಎ.ಲಕ್ಷ್ಮೀಸಾಗರ್.—ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ನಾವು ಈ ಟ್ಯಾಕ್ಸೇಷನ್ ಅನ್ನು ಎಷ್ಟರ ಮಟ್ಟಿಗೆ ಹಾಕಿದ್ದೇವೆಂದರೆ–Five Star Hotels which are recognised by the Department of Tourism, Government of India.

(Sri H.T. KRISHNAPPA in the Chair)

ಈ ಹೋಟೆಲುಗಳಿಗೆ ಜನಸಾಮಾನ್ಯರು ಯಾರೂ ಹೋಗುವುದಿಲ್ಲ. ಆದ್ದರಿಂದ ಜನಸಾಮಾನ್ಯರಿಗೆ ತೊಂದರೆಯಾಗುವುದಿಲ್ಲ ಈ ದೃಷ್ಟಿಯಿಂದ ಈ ಹೊಟೇಲುಗಳ ಮೇಲೆ ಹಾಕಿರುವ ತೆರಿಗೆಯನ್ನು ಸರಿಯಿಲ್ಲ ಎಂದು ಚರ್ಚೆ ಮಾಡುವುದು ಪ್ರಸ್ತುತ ಸರಿಯಲ್ಲ ಎಂದು ನನಗನಿಸುತ್ತದೆ. ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ವಿಚಾರವನ್ನು ಎತ್ತಿ ಮಾನ್ಯ ಸದಸ್ಯರಾದ ಪಿ. ರಾಂದೇವ್ ಅವರು ಬಹುಶ: ಈ ವಿಷಯ ಪ್ರಸ್ತಾಪಿಸಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಆ ಬಗ್ಗೆ ನಾನು ಉತ್ತರ ನೀಡುವುದು ಬೇಕಾಗಿಲ್ಲ ಎಂದು ನಾನು ಭಾವಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮೀಳ ಅವರು ಡ್ರಗೆಟುಗಳ ಮೇಲೆ ಇನ್ನೂ ಹೆಚ್ಚಿನ ತೆರಿಗೆ ಹಾಕಬೇಕಾಗಿತ್ತು ಎಂದು ಹೇಳಿದ್ದಾರೆ. ತಮಿಳುನಾಡಿನಲ್ಲಿ ೧೫ ಪರ್ಸೆಂಟ್ ಮತ್ತು ಆಂಧ್ರ ಪ್ರದೇಶದಲ್ಲಿ ೧೦ ಪರ್ಸೆಂಟ್ ಹಾಕಿದ್ದಾರೆ ನಾವು ೫ ಪರ್ಸೆಂಟ್ ಹಾಕಿದ್ದೇವೆ ಹಿಂದೆ ಇದರ ಮೇಲೆ ಹಾಕಿರಲಿಲ್ಲ. ಆದ್ದರಿಂದ ಈ ಸಾರಿ ಹಾಕೋಣ ಎಂದು ನಾವು ಪ್ರಯತ್ನ ಮಾಡಿದ್ದೇವೆ. ೧೯೭೩ರಲ್ಲಿ ವಿನಾಯಿತಿ ನೀಡಿದ್ದರು. ಇದರಿಂದ ಎಷ್ಟು ಹಣ ಬರುತ್ತದೆ ಎಂದು ಗಮನ ಕೊಡದಿದ್ದರೂ ಸ್ವಲ್ಪ ರೆವಿನ್ಯೂ ವಸೂಲು ಮಾಡುವ ದೃಷ್ಟಿಯಿಂದ ಹಾಕಿದ್ದೇವೆ. ಇನ್ನು ಕಡ್ಲೇಕಾಯಿ ಎಣ್ಣೆ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ ಇದು ಜನಸಾಮಾನ್ಯರು ಬಳಕೆ ಮಾಡುವ ವಸ್ತು, ಇದಕ್ಕೆ ನೀವು ತೆರಿಗೆ ಏತಕ್ಕೆ ಹಾಕಿದ್ದೀರಿ ಎಂದು ಕೇಳಿದ್ದಾರೆ. ನಮ್ಮಲ್ಲಿ ಇದಕ್ಕೆ ಹಿಂದೆ ಎರಡೂವರೆ ಪರ್ಸೆಂಟ್ ಇತ್ತು. ತಮಿಳುನಾಡಿನಲ್ಲಿ ೩ ಪರ್ಸೆಂಟು, ಆಂಧ್ರದಲ್ಲಿ ೪ ಪರ್ಸೆಂಟು, ಕೇರಳದಲ್ಲಿ ೪ ಪರ್ಸೆಂಟು, ಮಹಾರಾಷ್ಟ್ರದಲ್ಲಿ ೪ ಪರ್ಸೆಂಟು ಖಾದ್ಯ ತೈಲದ ಮೇಲೆ ತೆರಿಗೆ ಹಾಕಿದ್ದಾರೆ. ಆದ್ದರಿಂದ ಇದು ಒಂದು ರೀತಿಯಲ್ಲಿ ಪ್ಯಾರಿಟಿ ಇರಲಿ ಎಂಬ ಉದ್ದೇಶದಿಂದ ನಾವು ಹಾಕಿದ್ದೇವೆ. ಜನಸಾಮಾನ್ಯರು ಎಲ್ಲೇ ಇರಲಿ.....

SRI A. LAKSHMI SAGAR —Sir, this is not a justifiable ground. Our State keeping the tax at a lower level on edible oils, may induce those States to reduce the tax level there. This is an essential item of consumption by every one, and undisputably by the lowest rung of

the society. This is the point we are trying to make. It is not a question of bringing parity between two levels of taxation in different States. Why don't the Government keep the present level as it is? There is scarcity of oil and the prices are high. I request the Hon'ble Minister to please think over and not to close his mind over this fact. If the tax level is low here, it is quite possible that more oil will come to Karnataka State. I request him to think over this problem.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಾಮಾನ್ಯವಾಗಿ ನಾವು ತೆರಿಗೆ ಹಂತವನ್ನು ನೆರೆ ರಾಜ್ಯಗಳಿಗೆ ಹೋಲಿಕೆ ಮಾಡಿಕೊಂಡು ಮಾಡುತ್ತೇವೆ. ಜನಸಾಮಾನ್ಯರು ಉಪಯೋಗ ಮಾಡುವಂಥ ವಸ್ತುಗಳಾದರೂ ಕೂಡ ನಾವು ತೆರಿಗೆಯನ್ನು ಹಾಕದಿದ್ದರೆ ಅಭಿವೃದ್ಧಿ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಗ್ರಾಮೀಣಾಭಿವೃದ್ಧಿ ದೃಷ್ಟಿಯಿಂದ, ಹರಿಜನ ಗಿರಿಜನರ ಅಭಿವೃದ್ಧಿಯ ದೃಷ್ಟಿಯಿಂದ ಅನೇಕ ಬೃಹತ್ತಾದ ಕಾರ್ಯಕ್ರಮಗಳನ್ನು, ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋಗುತ್ತಿರುವಾಗ ಈ ತೆರಿಗೆ ಹಣವನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಖಾದ್ಯ ತೈಲಗಳಿಗೆ ಎಲ್ಲಾ ಕಡೆ ಜಾಸ್ತಿಯಿರುವಾಗ ನಾವು ಕೇವಲ ಎರಡೂವರೆ ಯಿಂದ ಮೂರು ಪರ್ಸೆಂಟ್ ಮಾತ್ರ ಮಾರಾಟ ತೆರಿಗೆ ಹಾಕಿದ್ದೇವೆ. ಇದನ್ನು ಲಾಭ ಮಾಡುವ ದೃಷ್ಟಿಯಿಂದ ಹಾಕಿಲ್ಲ. ಸಂಪನ್ಮೂಲಗಳ ಪ್ರಶ್ನೆ ನಮ್ಮ ಮುಂದೆ ಬಂದಾಗ, ಇದರ ಜೊತೆಯಲ್ಲೇ ನೆರೆರಾಜ್ಯಗಳು ಯಾವರೀತಿ ಮಾಡಿದ್ದಾರೆ ಎಂಬ ಪ್ರಶ್ನೆಯೂ ನಮ್ಮ ಮುಂದೆ ಬಂದಾಗ ಪ್ಯಾರಿಟಿ ಕಾಪಾಡುವ ದೃಷ್ಟಿಯಿಂದ ಈ ರೀತಿ ಹಾಕಿದ್ದೇವೆ. ಹುರಿಗೊಳಿಸಿದ ರೇಷ್ಮೆ ಬಗ್ಗೆ ಮಾನ್ಯ ಸದಸ್ಯರು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್ ಅವರು ಎದ್ದುನಿಂತಾಗಲೇ ಈ ವಿಷಯವನ್ನು ಅವರು ಪ್ರಸ್ತಾಪ ಮಾಡುತ್ತಾರೆ ಎಂದು ಕಾದುಕೊಂಡಿದ್ದೆ. ಅದೇ ರೀತಿ ಅವರು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯ ಬಂದಾಗ ಇಲ್ಲಿ ಜನಸಾಮಾನ್ಯರ ಪ್ರಶ್ನೆ ಉದ್ಭವಿಸುವುದಿಲ್ಲ. ನಾವೇನೂ ರೀಲರ್ ಮೇಲೆ ಹಾಕಿಲ್ಲ. ಅಥವಾ ಕಚ್ಚಾ ರೇಷ್ಮೆಯ ಮೇಲೆ ಹಾಕಿಲ್ಲ. ಏಕೆಂದರೆ ಅದಕ್ಕೆ ಎಕ್ಸ್‌ಚೇಂಜಿನಲ್ಲಿ ಮತ್ತು ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಸಾಕಷ್ಟು ಬೀಳುತ್ತದೆ. ಆ ಕಾರಣದಿಂದ ಅದನ್ನು ಮುಟ್ಟಲಿಲ್ಲ. ಹತ್ತಿ ಜನಸಾಮಾನ್ಯರು ಉಪಯೋಗ ಮಾಡುವಂಥ ವಸ್ತು. ಆದರೆ ಸಿಲ್ಕ್ ಜನಸಾಮಾನ್ಯರು ಉಪಯೋಗಿಸುವಂಥ ವಸ್ತು ಅಲ್ಲ. ಇದು ಶ್ರೀಮಂತರು, ಮತ್ತು ಹಣ ಇರತಕ್ಕವರು ಉಪಯೋಗ ಮಾಡುವಂಥಾದ್ದು. ಅದೂ ಕೂಡ ೨೫ ಸಾವಿರ ರೂಪಾಯಿಗಿಂತ ಹೆಚ್ಚು ವರಮಾನ ಬರುವಂಥವರ ಮೇಲೆ ಹಾಕುತ್ತಿದ್ದೇವೆ. ಅವರು ಬಡವರು, ಜನಸಾಮಾನ್ಯರು ಆಗುವುದಿಲ್ಲ ೧೯೭೩ರ ವರೆಗೆ ಇದು ಜಾರಿಯಲ್ಲಿದ್ದು ೧೯೭೩ರಲ್ಲಿ ಇದಕ್ಕೆ ರಿಯಾಯಿತಿ ನೀಡಿದ್ದರು. ಆದರೆ ಅದನ್ನು ಯಾವ ಕಾರಣದ ಮೇಲೆ ಮಾಡಿದ್ದರೋ ಗೊತ್ತಿಲ್ಲ. ಜನಸಾಮಾನ್ಯರಿಗೆ ತೊಂದರೆಯಾಗುವ ಹಾಗಿದ್ದರೆ ಅದನ್ನು ಹಾಕುವುದು ಬೇಡ ಎಂದು ಹೇಳಬಹುದಾಗಿತ್ತು. ಆದರೆ ಈ ಬಗ್ಗೆ ಪರಿಶೀಲನೆ ಮಾಡಿದಾಗ ರಿಯಾಯಿತಿ ನೀಡಿದ ಕಾರಣ ಸರಿಯಾಗಿ ಗೊತ್ತಾಗಲಿಲ್ಲ. ಸಾಮಾಜಿಕವಾಗಿ ಅಂಥ ಕಾರಣ ಏನೂ ಇರಲಿಲ್ಲ. ಆದ್ದರಿಂದ ಈ ಸಾರಿ ಸೇರಿಸಿದ್ದೇವೆ.

SRI A. LAKSHMI SAGAR.—Sir, as a matter of fact, it is a foreign exchange earner. The World Bank and the Government of India have special schemes to invest huge sums of money on this industry, and this twister is a very important link in the manufacture of silk and silk fabrics, and if this is meddled with and if there is any difficulty to this trade and it does not prosper well, you cannot produce finer varieties of silk which will have an international market. The twisters are the poorest among the employees in the silk trade. It will hit them and they may not be employed. This is the actual difficulty

and trouble. Atleast on an experimental basis it may be reduced to one percent, and if it works well and does not harm the industry, then, it could be increased to 2 percent next year. This is a serious problem and I request the Hon'ble Minister to think over this. I am prepared to take him to some of the twisting establishment and show him the type of people who work there. I am impressing upon the Hon'ble Minister the necessity of doing away with the tax on it.

ಶ್ರೀಮತಿ ಪ್ರಮಿಳಾ.—ಸೀರೆ ಉಡುವವರು ನಾವು. ನಮ್ಮ ಮೇಲೆ ಅಧಿಕ ಹೊರೆ ಬೀಳುತ್ತದೆ. ಬಳಕೆದಾರರು ಯಾರು ಎಂಬುದನ್ನು ತಾವು ಯೋಚನೆ ಮಾಡಬೇಕು. ಆದ್ದರಿಂದ ತಾವು ದಯವಿಟ್ಟು ರೇಷ್ಮೆ ಮೇಲೆ ಹೆಚ್ಚು ತೆರಿಗೆ ಹಾಕಬೇಡಿ ಎಂದು ಕೇಳಿಕೊಳ್ಳುತ್ತೇನೆ.

೪-೦೦ ಪಿ. ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಅಧ್ಯಕ್ಷರೆ, ಈ ಒಂದು ವಾದದಲ್ಲಿ ಅರ್ಥ ಇದೆ. ಏಕೆಂದರೆ, ಕುಮಾರಿ ಪ್ರಮಿಳಾ ಅವರು ಉಡುವ ಸೀರಿಗೆ ಸ್ವಲ್ಪ ದುಬಾರಿ ಬೆಲೆ ಆಗುತ್ತದೆಂದು ಅವರು ವಾದ ಮಾಡುತ್ತಿದ್ದಾರೆ.

ಕುಮಾರಿ ಎಸ್. ಪ್ರಮಿಳಾ.— ಇದು ನನ್ನೊಬ್ಬಳ ಪ್ರಶ್ನೆಯಲ್ಲ. ಕರ್ನಾಟಕದಲ್ಲಿ ಇರತಕ್ಕ ಎಲ್ಲ ಹೆಂಗಸರ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಇದನ್ನು ನಾನು ಒಪ್ಪುವುದಿಲ್ಲ. ದುಬಾರಿ ಬೆಲೆ ಕೊಟ್ಟು ರೇಷ್ಮೆ ಸೀರೆ ಉಡುವವರು ಕೆಲವರಿರಬಹುದು.

ಶ್ರೀಮತಿ ಸುಶೀಲಾ ಚಿಲುವರಾಜ್.— ಇದು ಇಡೀ ಕರ್ನಾಟಕಕ್ಕೆ ಸೇರಿದ ಮಹಿಳೆಯರ ವಿಷಯ ಆದ್ದರಿಂದ ಈ ಬಗ್ಗೆ ಗಮನವನ್ನು ಕೊಡಬೇಕಾಗುತ್ತದೆ.

ಕುಮಾರಿ ಎಸ್. ಪ್ರಮಿಳಾ.— ಮಾನ್ಯ ಮಂತ್ರಿಯವರು ಮದುವೆಯಾಗಿದ್ದಾರೆ. ಅವರಿಗೆ ಹೆಂಡತಿ ಇದ್ದಾರೆ. ತಾಯಿಯವರಿದ್ದಾರೆ, ಅಕ್ಕತಂಗಿಯರು ಇದ್ದಾರೆ, ದಯಮಾಡಿ ಅವರು ಈ ಬಗ್ಗೆ ಗಮನ ಹರಿಸಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೆ, ಮಾನ್ಯ ಲಕ್ಷ್ಮೀಸಾಗರ್ ಅವರು ವಿದೇಶಿ ವಿನಿಮಯದ ವಿಚಾರವಾಗಿ ಹೇಳಿದರು, ಈ ರೇಷ್ಮೆ ಮಾರಾಟ ತೆರಿಗೆಗೂ ವಿದೇಶೀ ವಿನಿಮಯಕ್ಕೂ ಯಾವ ಹೊಂದಾಣಿಕೆಯೂ ಇಲ್ಲ. ಆ ಪ್ರಶ್ನೆಯೇ ಪ್ರತ್ಯೇಕವಾದುದು. ನಾನೂ ಕೂಡ ಐರೋಪ್ಯ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ಆ ರಾಷ್ಟ್ರಗಳಿಗೆ ರೇಷ್ಮೆಯನ್ನು ಹೆಚ್ಚು ಪ್ರಮಾಣದಲ್ಲಿ ಮಾರಾಟ ಮಾಡಬೇಕೆಂದು ನಾವೂ ಪ್ರಯತ್ನ ಮಾಡಿದ್ದೇವೆ. ಆದರೆ ಆ ಪ್ರಶ್ನೆಯೇ ಬೇರೆ. ನಾವು ರೇಷ್ಮೆಯನ್ನು ವಿದೇಶಗಳಲ್ಲಿ ಮಾರಿ ಹೆಚ್ಚಿನ ಪ್ರಮಾಣದಲ್ಲಿ ವಿನಿಮಯ ಗಳಿಸಬೇಕೆಂದರೆ ನಮ್ಮ ರೇಷ್ಮೆಯ ಗುಣಮಟ್ಟ ಇನ್ನೂ ಹೆಚ್ಚಾಗಬೇಕು. ಇಲ್ಲದಿದ್ದರೆ ವಿದೇಶೀ ವಿನಿಮಯ ಕಷ್ಟವಾಗುತ್ತದೆ. ಆ ಕಾರಣದಿಂದಲೆ, ನಾವು ಇದನ್ನು ತಂದಿದ್ದೇವೆ. ಕೈಗಾರಿಕೆಗಳಿಗೆ ತೊಂದರೆಯಾಗಬಾರದು ಎಂಬ ದೃಷ್ಟಿಯಿಂದ ಇದನ್ನು ತಂದಿದ್ದೇವೆ. ಸರ್ಕಾರ ಈ ಬಗ್ಗೆ ಪರಿಶೀಲನೆ ಮಾಡಿದ ಪ್ರಕಾರ ಯಾವ ಅಂತಹ ದೊಡ್ಡ ಕಾರಣಗಳೂ ಈ ಬಗ್ಗೆ ಕಾಣಲಿಲ್ಲ. ಈ ಬಗ್ಗೆ ಯಾವುದಾದರೂ ವಿಷಯ ಬಂದ ಪಕ್ಷದಲ್ಲಿ ಅದನ್ನು ಪರಿಶೀಲನೆ ಮಾಡೋಣ. ಈಗಿನ ಪರಿಸ್ಥಿತಿಯಲ್ಲಿ There is no case for exempting twisted silk from the tax.

SRI A. LAKSHMI SAGAR. —At least keep an open mind.

SRI M. VEERAPPA MOILY.— I have an open mind. ಕೈ ಮಗ್ಗದ ವಿಚಾರವಾಗಿ, ರೇಷ್ಮೆ ಕೈಗಾರಿಕೆಯ ವಿಚಾರವಾಗಿ ನನಗೆ ಬಹಳ ಆತ್ಮೀಯತೆ ಇದೆ. ಕೈಗಾರಿಕೆಗೆ ಬಹಳ ಎತ್ತರವಾಗಿ ಬೆಳೆಯಬೇಕೆಂಬ ದೃಷ್ಟಿಯಿಂದಲೇ ಟ್ವಿಸ್ಟೆಡ್ ಯಾರ್ನ್‌ಗೆ ತೆರಿಗೆಯನ್ನು ಹಾಕುವಾಗ ಬಹಳ ವಿಚಾರಮಾಡಿ ತೆರಿಗೆಯನ್ನು ಹಾಕಿದ್ದೇವೆ. ಈ ಕೈಗಾರಿಕೆಗಳಿಗೆ ಹೆಚ್ಚಿನ ತೊಂದರೆ ಆಗದ ರೀತಿಯಲ್ಲಿ ನಾವು ತೆರಿಗೆಯನ್ನು

ಹಾಕಿದ್ದೇವೆ. ಈ ತೆರಿಗೆಯನ್ನು ಹಾಕುವಾಗ ನಾನು ಬಿಚ್ಚು ಮನಸ್ಸಿನಿಂದ ನೋಡಿ ಹಾಕಿದ್ದೇನೆ. ನಾನು ಕಂಡುಕೊಂಡ ಪ್ರಕಾರ ಈ ತೆರಿಗೆಯಿಂದ ಕೈಗಾರಿಕೆಯ ಬೆಳವಣಿಗೆಗಾಗಲೀ, ಅಥವಾ ಸಣ್ಣ ಸಣ್ಣ ನೇಕಾರರಿಗಾಗಲೀ ಅಥವಾ ರೇಷ್ಮೆಯನ್ನು ಬೆಳೆಯತಕ್ಕ ವ್ಯವಸಾಯಗಾರರು ಯಾರು ಇದ್ದಾರೆ ಅವರಿಗಾಗಲಿ ಯಾವ ತೊಂದರೆಯೂ ಆಗುವುದಿಲ್ಲವೆಂದು ಮನಗೊಂಡು ಈ ಒಂದು ತೆರಿಗೆಯನ್ನು ಹಾಕಲಾಗಿದೆ.

ಇನ್ನು ಕನ್ಸೆಷನರೀಸ್ ಬಗ್ಗೆ ಹೇಳುತ್ತೇನೆ. ಇದರ ಮೇಲೂ ಕೂಡ ೬ ಪರ್ಸೆಂಟಿನಿಂದ ೮ ಪರ್ಸೆಂಟ್‌ಗೆ ಏರಿಸಲಾಗಿದೆ. ತಮಿಳುನಾಡಿನಲ್ಲಿ ೮ ಪರ್ಸೆಂಟ್ ಇದೆ. ನಾವೇನೂ ಯಾವ ರಾಜ್ಯದಲ್ಲೂ ಇಲ್ಲದಂತಹ ತೆರಿಗೆಯನ್ನು ಹೇರುವುದಕ್ಕೆ ಹೋಗಿಲ್ಲ. ಈ ವಸ್ತುವನ್ನು ಮಕ್ಕಳು ದಿನನಿತ್ಯ ತಿನ್ನುವಂತಹದ್ದು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಇನ್ನೂ ಕೂಡ ಈ ಬಿಸ್ಕತ್ತುಗಳು ಏನಿವೆ ಇವು ಹಳ್ಳಿಗಳಲ್ಲಿನ ಬಡ ಮಕ್ಕಳ ಕೈಯ್ಯವರೆಗೆ ಬಂಟ್ಟಿಲ್ಲ, ಅವುಗಳನ್ನು ಕೊಂಡು ತಿನ್ನುತಕ್ಕಂತಹ ಒಂದು ಸಾಮರ್ಥ್ಯ ಕೂಡ ನಮ್ಮ ಬಡಜನರ ಮಕ್ಕಳಲ್ಲಿ ಇಲ್ಲ. ಆದುದರಿಂದ ಇದನ್ನು ಕೂಡ ನಾವು ಸಾಧಾರಣವಾಗಿ ಪ್ಯಾರಿಟಿ ಮೇಂಟೇನ್ ಮಾಡುವುದಕ್ಕೋಸ್ಕರ ಹಾಕಿದ್ದೇವೆ.

ಇನ್ನು ಆಡಿಕೆ ವಿಷಯದಲ್ಲಿ ಮಾನ್ಯ ಮಿತ್ರ ಸದಸ್ಯರಾದಂತ ಶ್ರೀ ರಾಮಭಟ್ ಅವರು ಈ ಬಗ್ಗೆ ತೆರಿಗೆಯನ್ನು ಜಾಸ್ತಿ ಮಾಡುವುದು ಅವಶ್ಯಕ ಕಾಣುವುದಿಲ್ಲವೆಂದು ಹೇಳಿದರು. ಆದರೆ ನಾವು ಇದರಲ್ಲೂ ಕೂಡ ಏನೂ ಹೆಚ್ಚು ಮಾಡಿಲ್ಲ. ತಮಿಳುನಾಡಿನಲ್ಲಿ ೫ ಪರ್ಸೆಂಟ್ ಇದೆ, ಆಂದ್ರಪ್ರದೇಶದಲ್ಲಿ ೪ ಪರ್ಸೆಂಟ್ ಇದೆ, ಕೇರಳದಲ್ಲಿ ೬ ಪರ್ಸೆಂಟ್ ಇದೆ. ಆದುದರಿಂದ ಇದೂ ಕೂಡ ಅತಿ ಹೆಚ್ಚಿನ ಟ್ಯಾಕ್ಸ್ ಏನೂ ಆಗುವುದಿಲ್ಲ. ಈ ಬಗ್ಗೆ ಮಾನ್ಯ ಸದಸ್ಯರು ಏನೋ ವ್ಯವಹಾರ ಸ್ಥಗಿತವಾಗುತ್ತದೆಂದು ಹೇಳಿದರು. ಅದನ್ನು ನೋಡೋಣ. I have an open mind.

ಶ್ರೀ ಕೆ. ರಾಮಭಟ್.— ೧೯೭೩-೭೪ರಲ್ಲಿ ಪೆಪ್ಪರ್ ಮೇಲೆ ಟ್ಯಾಕ್ಸ್ ಹಾಕಿದ ಕಾರಣದಿಂದ ಕರ್ನಾಟಕದಲ್ಲಿ ಪೆಪ್ಪರ್ ಮಾರ್ಕೆಟ್ಟೇ ಹೋಯಿತು. ಈಗ ಈ ಟ್ಯಾಕ್ಸ್‌ನ್ನು ಹಾಕಿದರೆ ಈಗ ಏನು ಕೇರಳದಿಂದ ೪೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಬರುತ್ತಿದೆ ಅದು ಬರುವುದು ನಿಲ್ಲುತ್ತದೆ. ಈ ಲಾಭದ ಆಸೆಯಿಂದ ದೊಡ್ಡ ಮೊತ್ತವನ್ನು ಕಳೆದುಕೊಳ್ಳಬೇಕಾಗುತ್ತದೆಂದು ಹೇಳಿದೆ. ಆದ್ದರಿಂದ ಇದನ್ನು ಕೈಬಿಡಬೇಕೆಂದು ನಾನು ಪ್ರಸ್ತಾಪ ಮಾಡಿದೆ.

ಸಭಾಪತಿಯವರು.— ಮಾನ್ಯ ಮಂತ್ರಿಯವರು ಮಧ್ಯ ಮಧ್ಯ ಯಿಲ್ಡ್ ಆಗಬಾರದು.

ಶ್ರೀ ಎಂ. ವೀರಪ್ಪ ಮೊಯ್ಲಿ.— ಟ್ವಿಸ್ಟೆಡ್ ಯಾರ್ನ್ ತೆರಿಗೆಯಿಂದ ಸುಮಾರು ಎರಡು ಕೋಟಿ ರೂಪಾಯಿ ಆದಾಯ ಬರುತ್ತದೆ.

ಇನ್ನು ಗಾರ್ಮೆಂಟ್ ವಿಚಾರವಾಗಿ ಅನೇಕ ಸದಸ್ಯರು ಹೇಳಿದ್ದಾರೆ. ಅನೇಕ ಸದಸ್ಯರು ಈ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಕೈಗಾರಿಕೆಯ ಬೆಳವಣಿಗೆಯ ದೃಷ್ಟಿಯಿಂದ ಈ ತೆರಿಗೆಯಿಂದ ಏನಾದರೂ ತೊಂದರೆ ಅಥವಾ ಗಂಡಾಂತರ ಎದುರಿಸುವ ಪ್ರಶ್ನೆ ಬಂದರೆ ಅದನ್ನು ಗಮನಕ್ಕೆ ತೆಗೆದುಕೊಳ್ಳಬಹುದು. ಆದರೆ ಇವತ್ತಿನ ಮಟ್ಟಿಗೆ ಹೇಳುವುದಾದರೆ, ನಾವು ಹಾಕಿರತಕ್ಕ ತೆರಿಗೆಗಳೆಲ್ಲಾ ಸ್ವಾಗತಾರ್ಹವಾದವುಗಳೆಂದು ತಿಳಿದಿದ್ದೇನೆ. ಈ ಮನೆಯ ಮಾನ್ಯ ಸದಸ್ಯರು ಯಾವ ಹೆಚ್ಚಿನ ಆಕ್ಷೇಪಣೆಯನ್ನು ಮಾಡಿದಹಾಗೆ ನನಗೆ ಕಾಣಲಿಲ್ಲ. ಇಷ್ಟು ಮಾತ್ರವಲ್ಲದೆ ಇವತ್ತು ಬೈಸಿಕಲ್ ಟ್ಯಾಕ್ಸ್ ಎಕ್ಸಮ್ಪ್ಟ್ ಮಾಡಿದ್ದೇವೆ. ಈಗಿನ ಕಾಲದಲ್ಲಿ ಪೆಟ್ರೋಲ್ ಕೊರತೆಯಿಂದ ತೊಂದರೆಯಾಗಿರುವುದರಿಂದ ಜನಸಾಮಾನ್ಯರು ಕಡಿಮೆ ಬೆಲೆಗೆ ಸಿಗುವ ಬೈಸಿಕಲ್‌ಗಳನ್ನು ಕೊಂಡುಕೊಳ್ಳಲೆಂದು ಟ್ಯಾಕ್ಸ್ ಎಕ್ಸಮ್ಪ್ಟ್ ಮಾಡಿದ್ದೇವೆ. ನಾವು ಅಭಿವೃದ್ಧಿ ಕಾರ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತ್ವರಿತವಾಗಿ ಮಾಡಲು ಹಣ ಬೇಕಾಗುತ್ತದೆ. ಆದ್ದರಿಂದ ಈ ಅಭಿವೃದ್ಧಿ ಯೋಜನೆಗೆ ಬೇಕಾಗುವ ಹಣಕ್ಕಾಗಿ ಟ್ಯಾಕ್ಸ್ ಹಾಕಬೇಕಾಗುತ್ತದೆ. ಅಭಿವೃದ್ಧಿ ಹೊಂದುತ್ತಿರುವ ಯಾವ ರಾಜ್ಯವೇ ಆಗಲಿ, ಯಾವ ರಾಷ್ಟ್ರವೇ ಆಗಲಿ, ತೆರಿಗೆಯ ಕೆಲವು ಅಂಶಗಳ ಭಾರವನ್ನು ಹೊರಬೇಕಾದುದು ಅವಶ್ಯಕವಿದೆ. ಇಲ್ಲದಿದ್ದರೆ, ವೇಗವಾಗಿ ಮತ್ತು ಬಹುಮುಖದ ಪ್ರಗತಿಯನ್ನು ರಾಜ್ಯ ಸಾಧಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಹೆಚ್ಚಿನ ಮಟ್ಟಿಗೆ ಎಲ್ಲಾ ಮಾನ್ಯ ಸದಸ್ಯರುಗಳು ಈ ತೆರಿಗೆಗಳಿಗೆ ಬೆಂಬಲವನ್ನು ಕೊಟ್ಟಿದ್ದಾರೆ. ಕೆಲವರು ಈ ಬಗ್ಗೆ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ.

I am interested in the development of the economy and the economy must be sustained by proper and reasonable taxation. With these remarks I request the hon. Members to endorse this Bill.

CHAIRMAN. –I shall now put the consideration motion to the vote of the House. The question is:

"That the Karnataka Taxation Laws (Amendment) Bill, 1980 be taken into consideration."

The motion was adopted

CLAUSE 2

CHAIRMAN.—I shall now take up clause by clause consideration of the Bill. There are amendments to clause 2 by the hon. Member Sri M. Chandrashekar. He may move them.

SRI M. CHANDRASHEKAR.—Sir, I beg to move :

(i) that the proposed sub-clause 2(g) of clause 2 shall be deleted.

(ii) that the proposed sub-clause 2(n) of clause 2 shall be deleted."

The question was proposed

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಮಂತ್ರಿಗಳು ಈ ವಿಷಯಗಳ ಬಗ್ಗೆ ಬಿಚ್ಚು ಮನಸ್ಸಿನವ ನಾಗಿದ್ದೇನೆಂದು ಹೇಳಿದರು. ಈಗಾಗಲೇ ತೀರ್ಮಾನ ತೆಗೆದುಕೊಂಡಿರುವ ಖಾದ್ಯವಸ್ತುಗಳ ಮೇಲಿನ ಅರ್ಧ ಪರ್ಸೆಂಟ್ ತೆರಿಗೆ ಏನಿದೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇದು ಮುಖ್ಯವಾದ ವಿಚಾರ. ಸುತ್ತಮುತ್ತಲ ಹಳ್ಳಿಗಳಲ್ಲಿ ಟ್ಯಾಕ್ಸ್ ಜಾಸ್ತಿ ಇದ್ದರೆ ತಾವು ಟ್ಯಾಕ್ಸನ್ನು ಹೆಚ್ಚು ಮಾಡುತ್ತೀರಿ. ಆದರೆ ಆಲ್ಲಿ ಕಡಿಮೆ ಟ್ಯಾಕ್ಸ್ ಇದ್ದರೆ ತಾವು ಅದನ್ನು ಇಳಿಸುವುದಕ್ಕೆ ಹೋಗುವುದಿಲ್ಲ. ಈ ತೆರಿಗೆಯನ್ನು ಏನು ಹಾಕಿದ್ದೀರಿ ಅದರಿಂದ ಬರುವ ಆದಾಯವನ್ನು ಬೇರೆ ತೆರನಾಗಿ ಸರಿಗಟ್ಟಿಕೊಳ್ಳುವುದಕ್ಕೆ ಆಗುವುದಿಲ್ಲವೆ ? ಜನಸಾಮಾನ್ಯರು ಅವಶ್ಯವಾಗಿ ಬಳಸತಕ್ಕ ವಸ್ತುವಾದ್ದರಿಂದ ಈ ಬಗ್ಗೆ ಹಾಕಿರುವ ತೆರಿಗೆಯನ್ನು ತೆಗೆದುಹಾಕಿದರೆ ಉತ್ತಮವೆಂದು ನಾನು ಹೇಳುತ್ತಿದ್ದೇನೆ. ಈ ತೆರಿಗೆಯಿಂದ ಎಷ್ಟು ಆದಾಯ ಬರುತ್ತದೆಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಆ ವಿಷಯದ ಬಗ್ಗೆ ನಾನು ಉತ್ತರ ಕೊಟ್ಟಿದ್ದೇನೆ. ಅದೇ ಪ್ರಕಾರ ಬೆಲೆ ಏರಿಕೆಗೆ ಸಂಬಂಧಪಟ್ಟಂತೆ ಖಾದ್ಯತೈಲವೇ ಆಗಲೀ, ಯಾವುದೇ ಆಗಲೀ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿಯೂ ಆಹಾರ ಧಾನ್ಯಗಳ ಮತ್ತು ಖಾದ್ಯತೈಲಗಳ ಬೆಲೆಗಳು ಏರಿವೆ. ಈ ವಿಚಾರದಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಇಲ್ಲ. ಅದರ ಮೇಲೆ ಪರಿಣಾಮ ಕೂಡ ಆಗುವುದಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರು ತಂದಿರತಕ್ಕ ತಿದ್ದುಪಡಿ ಏನಿದೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ತೆರೆದ ಮನಸ್ಸು ಅಂತ ತಾವು ಏನು ಹೇಳಿದ್ದೀರಿ; ಜನತೆಯ ಅಭಿಪ್ರಾಯ ಬಂದರೆ ಸರ್ಕಾರ ಅದನ್ನು ಪುನರ್ ಪರಿಶೀಲನೆ ಮಾಡುತ್ತೇವೆಂದು ತಾವು ಆಶ್ವಾಸನೆ ಕೊಟ್ಟರೆ ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಇಲ್ಲದಿದ್ದರೆ ಪ್ರೆಸ್ ಮಾಡಬೇಕಾಗುತ್ತದೆ.

CHAIRMAN.—Are you going to press both of your amendments ?

SRI M. CHANDRASEKHAR.—Yes, Sir.

CHAIRMAN.—I will now put both the Amendments to the vote of the House. The question is;

"(i) That the proposed sub clause 2 (g) of Clause 2 shall be deleted. and

(ii) Proposed sub-clause 2 (n) of Clause 2 shall be deleted."

The amendments were negatived

CHAIRMAN.—I will now put Clause 2 to the vote of the House. The question is :

"That Clause 2 do stand part of the Bill."

The motion was adopted

Clause 2 was added to the Bill

CLAUSES 3 AND 4

CHAIRMAN.—The question is .—

"That Clause 3 and 4 do stand part of the Bill"

The motion was adopted

Clauses 3 and 4 were added to the Bill

CLAUSE 1, Etc.,

CHAIRMAN.—The question is.

"That Clause 1, the Long Title, the Preamble and the Enacting Formula do stand part of the Bill."

The motion was adopted

Clause 1, the Long Title, the Preamble and the Enacting Formula were added to the Bill.

ಶ್ರೀ ಪಂಪಾಪತಿ.—ಸ್ವಾಮಿ. ತಾವು ಆಜ್ಞೆ ಮಾಡತಕ್ಕವರು, ತಾವೇ ಇಂಗ್ಲೀಷಿನಲ್ಲಿ ಓದುತ್ತೀರಿ. ಇಂಗ್ಲೀಷಿನಲ್ಲಿ ವ್ಯವಹಾರ ಮಾಡುತ್ತೀರಿ. ಕರ್ನಾಟಿಕ ರಾಜ್ಯ ಅಂತ ಹೆಸರಿಟ್ಟಿದ್ದಾರೆ. ಕನ್ನಡದಲ್ಲಿ ಹೇಳಿ ಬೇಕು.

ಛೇರ್ಮನ್.—ತಾವು ಕೂತುಕೊಳ್ಳಿ ತಾವು ಒಂದು ವಿಚಾರ ತಿಳಿದುಕೊಳ್ಳಬೇಕು. ನಾನು ನಿಂತು ಕೊಂಡಾಗ ತಾವು ಕೂತುಕೊಳ್ಳಬೇಕು. ಮುಸೂದೆಗೆ ಸಂಬಂಧಪಟ್ಟಂತೆ ಶಾಸ್ತ್ರೀಕ್ಕವಾದ ಕ್ರಿಯೆ ಆದಮೇಲೆ ತಾವು ಆಕ್ಷೇಪಣೆ ಎತ್ತಿ.

ಶ್ರೀ ಪಂಪಾಪತಿ.—ತಮ್ಮಲ್ಲಿ ನಾನು ಕೇಳಿಕೊಳ್ಳುವುದು ಕನ್ನಡದಲ್ಲಿ ವ್ಯವಹಾರ ನಡೆಸಿ ಎಂದು ವಿನಂತಿಸಿಕೊಳ್ಳುತ್ತೇನೆ.

Motion to Pass

SRI M. VEERAPPA MOILY (Minister for Finance and Planning). Sir I beg to move

"That the Karnataka Taxation Laws (Amendment) Bill, 1980 be passed."

CHAIRMAN —The question is

"That the Karnataka Taxation Laws (Amendment) Bill, 1980 be passed."

The motion was adopted and the bill was passed

KARNATAKA STAMP (AMENDMENT) BILL 1980

CHAIRMAN.—Now, Sri S. Bangarappa, Hon. Minister for Revenue and Agriculture to move the Karnataka Stamp (Amendment) Bill, 1980.

SRI S. BANGARAPPA (Minister for Revenue and Agriculture)

Motion to Consider

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಕರ್ನಾಟಕ ಸ್ಟಾಂಪ್ ತಿದ್ದುಪಡಿ ಮಸೂದೆ ೧೯೮೦ನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ.

The question was proposed

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಿಜಿಸ್ಟ್ರೇಷನ್ ತಿದ್ದುಪಡಿ ಆಕ್ಟ್ ಮತ್ತು ಕರ್ನಾಟಕ ಸ್ಟಾಂಪ್ ತಿದ್ದುಪಡಿ ಮಸೂದೆ ಎರಡನ್ನೂ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ. ಎರಡೂ ಕೂಡ ಒಂದೇ ಡಾಕ್ಯುಮೆಂಟಿಗೆ ಸಂಬಂಧಪಟ್ಟದ್ದು.

ಶ್ರೀ ಬಿ. ಬಸವಲಿಂಗಪ್ಪ.— ಒಂದೊಂದೇ ಪ್ರತ್ಯೇಕವಾಗಿ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ನನ್ನದು ಅಭ್ಯಂತರ ಏನೂ ಇಲ್ಲ.

ಛೇರ್ಮನ್.—ಇಬ್ಬರೂ ಅನುಕೂಲಕ್ಕೆ ತಕ್ಕಂತೆ ವ್ಯವಹರಿಸಬಹುದು.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಅಧ್ಯಕ್ಷರೇ, ೧೯೮೦ರ ಕರ್ನಾಟಕ ಸ್ಟಾಂಪ್ ತಿದ್ದುಪಡಿ ಮಸೂದೆಯಲ್ಲಿ ಈಗ ಇರತಕ್ಕಂಥ ಕಾನೂನಿಗೆ ಳಿಓ (ಎ) ಸೆಕ್ಷನ್ ಸೇರಿಸಬೇಕೆಂದು ತಿದ್ದುಪಡಿ ತರುತ್ತಿದ್ದೇವೆ. ಕಾರಣ ಏನೆಂದರೆ, ರಾಜ್ಯದ ಅನೇಕ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಸಾವಿರಾರು ಪತ್ರಗಳು ರಿಜಿಸ್ಟರ್ ಆಗಿವೆ. ರಿಜಿಸ್ಟರ್ ಆಗತಕ್ಕ ಸಂದರ್ಭದಲ್ಲಿ ಏನಾಗಿದೆ ಅಂದರೆ ಕೆಲವು ರಿಜಿಸ್ಟರ್ ಆಗತಕ್ಕಂಥ ಪತ್ರಗಳಲ್ಲಿ ಅಕೌಂಟೆಂಟ್ ಜನರಲ್ ಆಫೀಸಿನ ಲೆಕ್ಕಪರಿಶೋಧಕ ವಿಭಾಗದವರು ಹೋಗಿ ವಿಚಾರ ಮಾಡಿದಾಗ ಕೆಲವು ನಾನ್-ಲೆವಿ ಡಾಕ್ಯುಮೆಂಟ್ಸ್ ಸಿಕ್ಕಿವೆ. ಕೆಲವು ಕಡೆಗಳಲ್ಲಿ ಹೆಚ್ಚು ಸ್ಟಾಂಪ್ ಕೊಟ್ಟಿರತಕ್ಕಂಥಾದ್ದು ; ತಪ್ಪು ತಪ್ಪಾಗಿ ಲೆವಿ ಸ್ಟಾಂಪ್ ಡ್ಯೂಟಿ ಕೊಟ್ಟಿರತಕ್ಕಂಥದ್ದು ಕೂಡ ಗಮನಕ್ಕೆ ಬಂದಿದೆ. ಕೆಲವು ಸಾರಿ misclassification of documents ಆಗಿ ಪತ್ರ ಏನು ರಿಜಿಸ್ಟರ್ ಆಗಿದೆ ಅದು ಕಾನೂನು ಪ್ರಕಾರ ಸರಿಯಾಗಿ ಆಗಿಲ್ಲ. ವರ್ಗೀಕರಣ ಮಾಡತಕ್ಕ ಸಂದರ್ಭದಲ್ಲಿ ಸರಿಯಾಗಿ ಮಾಡಿಲ್ಲ, ಪದಗಳನ್ನು ಇಂಟರ್‌ಪ್ರಿಟ್ ಮಾಡುವಾಗ ಅಲ್ಲಿರತಕ್ಕ ವಾಕ್ಯಗಳ ಬಗ್ಗೆ ಬೇರೆ ರೀತಿಯ ಅರ್ಥ ಕಲ್ಪಿಸಿ ಸ್ಟಾಂಪ್ ಡ್ಯೂಟಿ ವ್ಯತ್ಯಾಸಗಳಾಗಿವೆ, ಹೀಗೆಲ್ಲಾ ಆಗಿದೆ ಎಂದು ಅಕೌಂಟೆಂಟ್ ಜನರಲ್ ಆಫೀಸಿನವರು ನೋಡಿ ಸರ್ಕಾರದ ಗಮನಕ್ಕೆ ತಂದರು. ಕೆಲವು ಸಾರಿ ಪಾರ್ಟಿಗಳು ಬೇಕೆಂತಲೇ ಹಣ ಉಳಿಸುವ ದೃಷ್ಟಿಯಿಂದ